# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ</u>

## <u>ಎಸ್.ಸಿ. ಸಂಖ್ಯೆ: 04/2022</u>

ಫ್ರಾಸಾ–05

ಚಾಸಾ–08

| | | |
|---|---|---|
| ಸಾಕ್ಷಿಯ ಹೆಸರು | – | ಮುಕ್ತುಮ ಹುಸೇನ ಹಿರೆಕುಂಬಿ |
| ತಂದೆಯ/ಗಂಡನ ಹೆಸರು | – | ಹಬೀಬು ಉಲ್ಲಾ |
| ವಯಸ್ಸು | – | 35 ವರ್ಷ |
| ಉದ್ಯೋಗ | – | ಆಟೋ ಚಾಲಕ |
| ವಾಸಸ್ಥಳ | – | ಧಾರವಾಡ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | – | 26–09–2023 |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ</u>**

ಚಾಸಾ–1 ನನ್ನ ಅಣ್ಣ. ಚಾಸಾ–9 , 10 ಮತ್ತು 11 ರವರ ಪರಿಚಯ ಇದೆ. ಆರೋಪಿಯ ಪರಿಚಯ ಇದೆ.

2. ನಾನು ಆರೋಪಿಯಿಂದ 4000 ರೂ ಗಳನ್ನು ಸಾಲ ಪಡೆದುಕೊಂಡಿದ್ದೆನು. ಇದರ ಸಂಬಂಧ 30–9–2022 ರಂದು ಸಂಜೆ 5.30 ಘಂಟೆಯಲ್ಲಿ ನಾನು ದೊಡ್ಡಮನಿ ಹಾಲ್ ಹತ್ತಿರ ಕಿರಾಣಿ ಅಂಗಡಿ ಪಕ್ಕದಲ್ಲಿ ಕುಳಿತಿದ್ದು ಆರೋಪಿ ಬಂದು ಹಣ ಕೊಡು ಎಂದು ಕೇಳಿದ್ದು ಆಗ ನಾನು 4 ದಿನ ಸಮಯ ಕೊಡು ಎಂದು ಹೇಳಿದೆನು. ಆರೋಪಿ ರಾಂಡಕೇ ಚಿನಾಲಿಕೆ ಎಂದು ಬೈದಾಡಿ ನಿನ್ನನ್ನು ಬಿಡುವುದಿಲ್ಲ ಖಲಾಸ ಮಾಡುತ್ತೇನೆ ಎಂದು ಕೊಯ್ತಾದಿಂದ ನನ್ನ ತಲೆಯ ಹಿಂಭಾಗಕ್ಕೆ ಮತ್ತು ಹೊಟ್ಟೆಗೆ ಹೊಡೆದನು. ಆರೋಪಿ ನನಗೆ ಹೊಡೆದಿದ್ದರಿಂದ ನನಗೆ ರಕ್ತಗಾಯವಾಗಿ ನನ್ನ ಬಟ್ಟೆಗಳು ರಕ್ತಸಿಕ್ತವಾಗಿದ್ದವು. ಆಗ ಫೈರೋಜ ಪಠಾಣ ಮತ್ತು ಅಕ್ವಿಬ್ ಬೆಟಗೇರಿ ಬಂದು ಆರೋಪಿಯಿಂದ ನನ್ನನ್ನು ಬಿಡಿಸಿಕೊಂಡರು. ಆಗ ಆರೋಪಿ ಅವರು ಬಂದಿದ್ದಾರೆಂದು ನಿನ್ನನ್ನು ಬಿಟ್ಟಿದ್ದೇನೆ ಇಲ್ಲದಿದ್ದರೆ ನಿನ್ನನ್ನು ಖಲಾಸ ಮಾಡುತ್ತಿದ್ದೆ ಎಂದು ಹೇಳಿ ಸ್ಥಳದಿಂದ ಓಡಿ ಹೋದನು.

3. ಪೈರೋಜ ಪಠಾಣ ಮತ್ತು ಅಕ್ವಿಬ್ ಬೆಟಗೇರಿ ನನ್ನನ್ನು ಸಿವಿಲ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ನನ್ನನ್ನು ಕಿಮ್ಸ ಹುಬ್ಬಳ್ಳಿಗೆ ಕರೆದುಕೊಂಡು ಹೋಗಿದ್ದಾರೆ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ನನ್ನ ಅಣ್ಣ ಆಸ್ಪತ್ರೆಗೆ ಬಂದನು. ನಾನು ನನ್ನ ಅಣ್ಣನಿಗೆ ಘಟನೆಯ ವಿಷಯ ತಿಳಿಸಿದೆನು. ನನ್ನ ಅಣ್ಣ ಪಿರ್ಯಾದಿಯನ್ನು ಕೊಟ್ಟಿದ್ದಾರೆ. ನಾನು 10 ದಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ.

4. ಆರೋಪಿ ನನಗೆ ಹೊಡೆಯಲು ಉಪಯೋಗಿಸಿದ ಕೊಯ್ತಾವನ್ನು ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಕೊಯ್ತಾವನ್ನು ಗುರುತಿಸಿದ್ದು ಅದನ್ನು ಈಗಾಗಲೇ ಮುಮಾ-4 ಎಂದು ಗುರುತಿಸಲಾಗಿದೆ. ನನ್ನ ತಕ್ತ ಸಿಕ್ತ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮುಮಾ-2 ಮತ್ತು 3 ಎಂದು ಗುರುತಿಸಲಾಗಿದೆ. ಪೊಲೀಸರು ನನ್ನ ವಿಚಾರಣೆ ಮಾಡಿದ್ದಾರೆ.

5. ಪೊಲೀಸರು ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದು ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿದ್ದೇನೆ. ಆ ದಿನ ನನ್ನ ಮೇಲೆ ಹಲ್ಲೆ ಮಾಡಿದ ಆರೋಪಿಯನ್ನು ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಗುರುತಿಸಿದ್ದಾರೆ. ಆರೋಪಿಯು ಹಣದ ವಿಚಾರವಾಗಿ ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ನನ್ನ ಮೇಲೆ ಹಲ್ಲೆ ಮಾಡಿದ್ದಾನೆ.

**<u>ಪಾಟೀಸವಾಲು ಆರೋಪಿ ಪರವಾಗಿ ಶ್ರೀ ಎಂ ಜಿ ಆರ್ ವಕೀಲರಿಂದಃ</u>**

ಆರೋಪಿ ಪರ ವಕೀಲರು ಗೈರು ಹಾಜರಾಗಿದ್ದು , ಆರೋಪಿಯು ಸಾಕ್ಷಿಯನ್ನು ಪಾಟಿ ಸವಾಲಿಗೆ ಒಳಪಡಿಸಲು ಸಮಯಾವಕಾಶ ಕೇಳಿದ್ದಾನೆ. ಆರೋಪಿಯು ಸಾಕ್ಷಿಗೆ 500 ರೂ ಖರ್ಚು ಕೊಡುವಂತೆ ಆದೇಶಿಸಿ ಆರೋಪಿಯ ಕೋರಿಕೆಯಂತೆ ಪಾಟಿ ಸವಾಲನ್ನು ಮುಂದೂಡಲಾಗಿದೆ .

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

(ಶ್ರೀಮತಿ ಕೆ.ಜಿ. ಶಾಂತಿ )
ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಧಾರವಾಡ.